ಮಾನ್ಯ ಉಪಾಧ್ಯಕ್ಷರೆ 1999 ರ ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ ತಿದ್ದುಪಡಿ *ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.*

ಉಪಾಧ್ಯಕ್ಷರು ವಿಧೇಯಕವನ್ನು ಮಂಡಿಸಲಾಗಿದೆ.

(2)ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ)ವಿಧೇಯಕ 1999 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರು) (ವಸತಿ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ 1999ರ ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

1999ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರು) (ವಸತಿ ಸಚಿವರ ಪರವಾಗಿ) :- ಮಾನ್ಯ ಉಪಾಧ್ಯಕ್ಷರೆ 1999 ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾದ್ಯಕ್ಷರು : ** ವಿಧೇಯಕವನ್ನು ಮಂಡಿಸಲಾಗಿದೆ.**

ಉಪಾಧ್ಯಕ್ಷರು : ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 1999 ಅನ್ನು ಮಾನ್ಯ ಮಂತ್ರಿಗಳು ಮಂಡಿಸುವುದು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು :- ಮಾನ್ಯ ಉಪಾಧ್ಯಕ್ಷರು 1999ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಶ್ರೀ ಎಂ ವೈ. ಘೋರ್ಪಡೆ (ಸೊಂಡೂರು) - ಇದು ಎಷ್ಟರ ಮಟ್ಟಿಗೆ ಸಮರ್ಪಕವೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಹೈಕೋರ್ಟ್‌ನವರು ಬಹಳ ಸ್ಪಷ್ಟವಾಗಿ ಇದನ್ನು ಇಗ್ನೋರ ಮಾಡಬೇಕು ಇದು ಸಂವಿಧಾನವನ್ನು ಹೊಡೆದು ಹಾಕುವುದಕೋಸ್ಕರ ಮಾಡಿರತಕ್ಕಂಥ ಒಂದು ತಂತ್ರ ಎನ್ನುವ ದಾಟಿಯಲ್ಲಿ ಹೇಳಿದ್ದಾರೆ. ಅವರು ಕೊಟ್ಟಂಥ ತೀರ್ಪನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿ ಈ ವಿಧೇಯಕವನ್ನು ಇಲ್ಲಿ ಮಂಡಿಸಿದರೆ ಹೇಗೆ ? ತಾವು ಮಾಡಿರುವ ಸುಗ್ರೀವಾಜ್ಞೆಗೋಸ್ಕರವಾಗಿ ತಾವು ಈ ಬಿಲ್‌ನ್ನು ತಂದಿರುವುದು. ಈ ರೀತಿ ಮಂಡನೆ ಮಾಡಿದರೆ ಏನು ಅರ್ಥವಾಗುತ್ತದೆ. ಹೈಕೋರ್ಟ್ ಹೇಳಿರುವ ಬಗ್ಗೆ ತಮಗೆ ಯಾವುದೇ ವಿಶ್ವಾಸ ಹಾಗೂ ಆದರ ಇಲ್ಲವೆಂದು ಅರ್ಥವಾಗುತ್ತದೆ. ಈ ಸರ್ಕಾರದ ಉದ್ದೇಶವೇನು ಎಂಬುದನ್ನು ಮೊದಲು ಹೇಳಿ.

---

* ಸಹಬಂಧ I

** ಸಹಬಂಧ II